# ಪುಟ್ಟ ದೇಶ, ದೊಡ್ಡ ಕನಸು!

‘ಸ್ಮಾಲ್ ಈಸ್ ಬ್ಯೂಟಿಫುಲ್’ ಎನ್ನುವ ನುಡಿಗಟ್ಟಿಗೆ ಕ್ರೊವೇಷ್ಯಾ ಹೊಸ ಸೇರ್ಪಡೆ!

■ ಆನಂದತೀರ್ಥ ಪ್ಯಾಟಿ



ಯೂರೋಪಿನ ಈ ಪುಟ್ಟ ದೇಶದ ಹೆಸರು ಈ ಹಿದೆ ಕೇಳಿದ್ದವರೇ ಕಡಿಮೆ. ಆದರೆ ಈಚೆಗೆ ರಷ್ಯಾದಲ್ಲಿ ನಡೆದ ಫಿಫಾ– 2018 ವಿಶ್ವಕಪ್ ಫುಟ್‌ಬಾಲ್ ಕ್ರೊವೇಷ್ಯಾದ ಚಹರೆಯನ್ನು ಬದಲಿಸಿಬಿಟ್ಟಿತು. ಘಟಾನುಘಟಿ ದೇಶಗಳ ಜತೆ ಸೆಣಸಿ, ಫೈನಲ್ ಪ್ರವೇಶಿಸಿ ಕಪ್ ಗೆಲ್ಲದೇ ಹೋದರೂ ಕೋಟಿಗಟ್ಟಲೇ ಅಭಿಮಾನಿಗಳ ಹೃದಯವನ್ನು ಕದ್ದಿದ್ದು ಸುಳ್ಳಲ್ಲ.

ಆಸುಪಾಸು ದೇಶಗಳು ವರ್ಷಗಟ್ಟಲೇ ಕದನದಲ್ಲಿ ಮುಳುಗಿರುವಾಗ, ಕ್ರೊವೇಷ್ಯಾ ಅದಕ್ಕೆ ಹೊರತಾಗಿದ್ದಿಲ್ಲ. ಯುಗೊಸ್ಲಾವಿಯಾದ ಭಾಗವಾಗಿದ್ದ ಕ್ರೊವೇಷ್ಯಾ, 1991ರಲ್ಲಿ ಸ್ವತಂತ್ರವಾಯಿತು; 2013ರಲ್ಲಿ ಐರೋಪ್ಯ ಒಕ್ಕೂಟವನ್ನು ಸೇರಿಕೊಂಡಿತು. ಒಟ್ಟು ಜನಸಂಖ್ಯೆಯ ಪೈಕಿ ಶೇಕಡ 88ರಷ್ಟು ಕ್ಯಾಥೊಲಿಕರು. ಯಹೂದಿಗಳು, ಮುಸ್ಲಿಮರು ಹಾಗೂ ಇತರ ಕ್ರೈಸ್ತರೂ ಇದ್ದಾರೆ. ಕ್ರೊವೇಷ್ಯಾದ ರಾಜಧಾನಿ ಝಾಗ್ರೆಬ್ ಪ್ರಾಚೀನ ನಗರಿ. ಇದರ ಜನಸಂಖ್ಯೆ ಸುಮಾರು ಒಂದು ಲಕ್ಷ.

ವಿಶ್ವಸಂಸ್ಥೆ ಪ್ರಕಟಿಸಿರುವ ಪ್ರಕಾರ, ಕ್ರೊವೇಷ್ಯಾ ಉತ್ತಮ ಆರ್ಥಿಕತೆ ಹೊಂದಿರುವ ರಾಷ್ಟ್ರ. ಪ್ರವಾಸೋದ್ಯಮದ ಮೂಲಕವೇ ಸಾಕಷ್ಟು ಆದಾಯವನ್ನು ಗಳಿಸುತ್ತಿದೆ. ಇಟಲಿ ಹಾಗೂ ಜರ್ಮನಿಯಂಥ ಸಿರಿವಂತ ದೇಶಗಳೂ ಸೇರಿದಂತೆ ವಿವಿಧ ದೇಶಗಳಿಂದ ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಇಲ್ಲಿನ ತಾಣಗಳಿಗೆ ಲಗ್ಗೆ ಇಡುತ್ತಾರೆ. ವಾರ್ಷಿಕ ಒಂದೂಕಾಲು ಕೋಟಿಯಷ್ಟು ಪ್ರವಾಸಿಗರು ಕ್ರೊವೇಷ್ಯಾದ ಆತಿಥ್ಯ ಸವಿದು ಮರಳುತ್ತಾರೆ.

## ಕ್ರೀಡಾಸಕ್ತಿ

ಅತ್ಯಂತ ಸಣ್ಣ ದೇಶಗಳಲ್ಲೊಂದಾದ ಕ್ರೊವೇಷ್ಯಾದ ಜನಸಂಖ್ಯೆ 40 ಲಕ್ಷ ಅಷ್ಟೇ. ಈ ಪೈಕಿ 4 ಲಕ್ಷ ಜನರು ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಫುಟ್‌ಬಾಲ್ ಅತ್ಯಂತ ಜನಪ್ರಿಯ. ಕ್ರೊವೇಷ್ಯನ್ ಫುಟ್‌ಬಾಲ್ ಫೆಡರೇಶನ್‌ನಲ್ಲಿ 1.18 ಲಕ್ಷ ಆಟಗಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಫುಟ್‌ಬಾಲ್ ಪಂದ್ಯಗಳ ವೀಕ್ಷಣೆಗೆ ಸದಾ ನೂಕುನುಗ್ಗಲು. ಈವರೆಗೆ ನಡೆದ ಒಲಿಂಪಿಕ್‌ಗಳಲ್ಲಿ ಕ್ರೊವೇಷ್ಯಾ ಒಟ್ಟು 44 ಪದಕಗಳನ್ನು ಬಾಚಿಕೊಂಡಿದೆ.

ಫಿಫಾದಲ್ಲಿ ಹೆಚ್ಚು ಗಮನ ಸೆಳೆದ ದೇಶಗಳ ಪೈಕಿ ಕ್ರೊವೇಷ್ಯಾಕ್ಕೆ ಅಗ್ರ ಸ್ಥಾನ. ಫೈನಲ್‌ಗೆ ಲಗ್ಗೆ ಇಟ್ಟಾಗ ಕ್ರೊವೇಷ್ಯಾದ ಬಗ್ಗೆ ತಿಳಿದುಕೊಳ್ಳಲು ನೆಟ್ಟಿಗರು ಹುಡುಕಾಟ ಆರಂಭಿಸಿದ್ದರಿಂದ ಅಷ್ಟೊಂದು ಪರಿಚಿತವಲ್ಲದ ದೇಶ, ದಿಢೀರನೇ ಅಂತರ್ಜಾಲದಲ್ಲಿ ಹುಡುಕಾಟದ ಆದ್ಯತಾ ಪಟ್ಟಿಯಲ್ಲಿ ಮೇಲೇರಿತು. ಅದೆಲ್ಲಕ್ಕಿಂತ ಹೆಚ್ಚಾಗಿ, ಅರ್ಧ ಕೋಟಿಗೂ ಕಡಿಮೆ ಜನಸಂಖ್ಯೆಯ ದೇಶವೊಂದು ಫುಟ್‌ಬಾಲ್ ಫೈನಲ್ ಪ್ರವೇಶಿಸಿದ್ದು ಹೇಗೆ ಎಂಬ ರಹಸ್ಯ ಅರಿಯಲು ತಡಕಾಡಿದ್ದೇ ಜಾಸ್ತಿ. ತಮಾಷೆಯೆಂದರೆ, ಅಷ್ಟೇ ಕುತೂಹಲ ಆ ದೇಶದ ಅಧ್ಯಕ್ಷೆಯ ಕುರಿತು ಕೂಡಾ!

ವಿಶ್ವಕಪ್ ಟೂರ್ನಿಯಲ್ಲಿ ಹಲವು ದಿಗ್ಗಜರನ್ನು ಮಣಿಸಿದ ಆ ದೇಶ,